Publication : Udayavani
Date: February 12, 2015
Page No: 16
Edition: State

SARA Media Net
*Simply communicate...*



ಬಾಲ್ಕನಿ

16 ಗುರುವಾರ | ಫೆಬ್ರವರಿ | 12 | 2015

ಬೆಂಗಳೂರು ಉದಯವಾಣಿ

## ಕನ್ನಡದಲ್ಲೇ ಮಾತಾಡಿದ್ರು ಬಾಲಿವುಡ್ ನಟ ರಾಹುಲ್ ಬೋಸ್

ರಾಹುಲ್ ಬೋಸ್ ಕನ್ನಡದಲ್ಲಿ ನಟಿಸಿರುವುದಷ್ಟೇ ಅಲ್ಲ, ತಮ್ಮ ಪಾತ್ರಕ್ಕೆ ತಾವೇ ಡಬ್ ಕೂಡ ಮಾಡಿದ್ದಾರೆ.

-ಬಾಲಿವುಡ್ ನಟನ ಮಟ್ಟಿಗೆ ಇದೊಂದು ದೊಡ್ಡ ಸಾಧನೆಯೇ. ಅಪೂರ್ವ ಕಾಸರವಳ್ಳಿ ನಿರ್ದೇಶನದ 'ನಿರುತ್ತರ' ಚಿತ್ರದಲ್ಲಿ ಮುಖ್ಯ ಪಾತ್ರ ಮಾಡುತ್ತಿರುವ ರಾಹುಲ್, ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡುವ ನಿರ್ಧಾರ ಮಾಡಿದ್ದು ಹಳೇ ಸುದ್ದಿ. ಈಗ ಸತತ ಸ್ಟುಡಿಯೋದಲ್ಲಿ ಕುಳಿತು, ಕನ್ನಡ ಕಲಿತು, ಅದರ ಉಚ್ಚಾರ ಕಲಿತು, ಪ್ರಾಕ್ಟೀಸ್ ಮಾಡಿ ಬಹುತೇಕ ಯಶಸ್ಸು ಹೊಂದಿದ್ದಾರೆ.

'ನಾನು ತಮಿಳಲ್ಲೂ ಡಬ್ ಮಾಡಿದ್ದೇನೆ. ಬೆಂಗಾಲಿ, ಹಿಂದಿ ಮಾಡಿದ್ದೇನೆ. ಆದರೆ ತಮಿಳಿಗೆ ಹೋಲಿಸಿದರೆ ಕನ್ನಡ ಸ್ವಲ್ಪ ಸುಲಭ' ಅಂದರು ಬುಧವಾರ. ಬೆಂಗಳೂರಿನ ಅಶ್ವಿನಿ ಸ್ಟುಡಿಯೋದಲ್ಲಿ ಅವರು ತಮ್ಮ ಈ ಡಬ್ಬಿಂಗ್ ಅನುಭವ ಹಂಚಿಕೊಂಡರು. ಅಂದಹಾಗೆ ಅವರ ಪ್ರಕಾರ ಒಂದು ಪಾತ್ರ ಅಂದರೆ ಆ ನಟನ ಧ್ವನಿ ಕೂಡ. 'ಪಾತ್ರದ 50 ಶೇ. ಕಲಾವಿದನ ಧ್ವನಿಯೂ ಆಗಿರುತ್ತೆ. ಬೇರೆ ಯಾರೋ ನನ್ನ ಪಾತ್ರಕ್ಕೆ ಧ್ವನಿ ಕೊಟ್ಟರೆ ಅದರಲ್ಲಿ ಏನು ವಿಶೇಷ ಇದೆ. ಅದಕ್ಕೇ ಕಲಿತು, ಡಬ್ ಮಾಡಲೇಬೇಕು ಅಂತ ಕಷ್ಟಪಟ್ಟಿದ್ದೇನೆ' ಅಂದರು. ಅಂದಹಾಗೆ ಇದು 'ಚಂದ್ರಮುಖಿ' ಭಾವನಾ ಸೋದರ ಅರವಿಂದ್ ರಾಮಣ್ಣ ನಿರ್ಮಿಸುತ್ತಿರೋ ಈ ಚಿತ್ರದಲ್ಲಿ ಭಾವನಾ, ಐಂದ್ರಿತಾ ರೇ ನಟಿಸುತ್ತಿದ್ದಾರೆ.

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525   Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**